ಆ) ಬಲ್ಕ್ ವೆಂಡಿಂಗ್ ಬೂತ್‌ಗಳ ಮುಖಾಂತರ ಹಾಲು ಸರಬರಾಜು ಮಾಡಲು ಹಾಲನ್ನು ವಿಶೇಷ ರೀತಿಯಲ್ಲಿ ಸಂಸ್ಕರಿಸಬೇಕಾಗಿರುವುದರಿಂದ ಹಾಗೂ ಇದಕ್ಕೆ ವಿಶೇಷ ರೀತಿಯ ಯಂತ್ರಗಳು ಬೇಕಾಗಿರುವುದರಿಂದ ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ಇತರೆ ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಮಾತೃಡೈರಿ, ಬೆಂಗಳೂರು ಮಾತ್ರ ಈ ಸೌಲಭ್ಯ ಹೊಂದಿರುವುದರಿಂದ ಬೆಂಗಳೂರಿನಲ್ಲಿ ಮಾತ್ರ ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ತೆರೆಯಲು ಸಾಧ್ಯವಾಗಿದೆ ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಯೋಜನೆಯ ಅನುಸಾರವಾಗಿ ದೇಶದ ಮೆಟ್ರೋ ಕೇಂದ್ರಗಳಲ್ಲಿ ಮಾತ್ರ ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ಪ್ರಾರಂಭಿಸಲಾಗಿದೆ.

ಉದಾ: ದೆಹಲಿ, ಕಲ್ಕತ್ತಾ, ಮದ್ರಾಸ್, ಬೆಂಗಳೂರು ಮತ್ತು ಹೈದರಾಬಾದ್ ಪಟ್ಟಣಗಳು.

ಜಿಲ್ಲಾ ಕೇಂದ್ರಗಳ ಗ್ರಾಹಕರ ಪೂರ್ಣ ಬೇಡಿಕೆಯನ್ನು ಸ್ಯಾಚೆಟ್‌ಗಳ ಮುಖಾಂತರ ಪೂರೈಸಲಾಗುತ್ತಿದೆ.

ಆ) ಸ್ಯಾಚೆಟ್ ಮುಖಾಂತರ ಉತ್ತಮ ಗುಣಮಟ್ಟದ ಹಾಲನ್ನು ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತಿರುವುದರಿಂದ ಬಲ್ಕ್ ವೆಂಡಿಂಗ್ ಬೂತುಗಳನ್ನು ಪ್ರಾರಂಭಿಸುವುದು ಈ ಸಧ್ಯಕ್ಕೆ ಅವಶ್ಯಕತೆ ಇರುವುದಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ

303 (1083) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು ?

ಆ) ಅವುಗಳಲ್ಲಿ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) 1262.

ಇದಲ್ಲದೆ 623 ಪ್ರಾಥಮಿಕ ಆರೋಗ್ಯ ಘಟಕಗಳಿರುತ್ತವೆ.

ಆ) ಒಟ್ಟು ಖಾಲಿ ಇರುವ 493 ಖಾಲಿ ಹುದ್ದೆಗಳ ಪೈಕಿ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ 375 ಹುದ್ದೆಗಳು ಖಾಲಿ ಇರುತ್ತವೆ.

ಧಾರವಾಡ ಜಿಲ್ಲೆಯಲ್ಲಿ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳು

305 (325) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):-

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದಿಂದ ಮಂಜೂರಾಗಿದ್ದು ಖಾಲಿಯಿರತಕ್ಕ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; ಮತ್ತು ಮಾಡಿದಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ;

ಇ) ಯಾವ್ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಇನ್ನೂ ಹುದ್ದೆಗಳು ಖಾಲಿಯಿವೆ ಮತ್ತು ಅವುಗಳನ್ನು ಭರ್ತಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಶಿಕ್ಷಣ ಸಚಿವರು):–

ಆ) ಒಟ್ಟು 197

ಆ) ಸುಪ್ರೀಂ ಕೋರ್ಟಿನ ಪ್ರಕಾರ 17 ಮಂದಿ ಸ್ಟಾಪ್–ಗ್ಯಾಪ್ ಉಪನ್ಯಾಸಕರ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

ಇ) ಪಟ್ಟಿ ಲಗತ್ತಿಸಿದೆ.

ಸದ್ಯಕ್ಕೆ ಖಾಲಿ ಇದ್ದ ಹುದ್ದೆಗಳ ಮಾಹಿತಿ

ಅ.ನಂ. ಶಾಲೆಯ ಹೆಸರು	ಖಾಲಿ ಹುದ್ದೆ ವಿವರ		
	ನಿವೃತ್ತಿ	ರಾಜೀನಾಮೆ	ನಿಧನ
1. ಎಫ್.ಎಂ.ಡಿ. ಪ್ರೌಢಶಾಲೆ, ಶಿರಹಟ್ಟಿ	1	–	–
2. ಎಸ್.ಡಿ.ವಿ.ಎಂ. ಪ್ರೌ.ಶಾ.ಹೊಳೆ–ಇಟಗಿ	–	–	1
3. ಎಸ್.ಆರ್.ಇ.ಎಸ್. ಪ್ರೌ.ಶಾ. ನೂರಣಗಿ	–	–	1
4. ಎಸ್.ಎಸ್.ವಿ. ಪ್ರೌ.ಶಾ. ಅರಟಾಳ–ಧುಂಡತಿ	1	–	
5. ಶಂಕರಲಿಂಗ ಪ್ರೌ.ಶಾ., ಹೊಂಬಳ	–	–	1
6. ಕೆ.ವಿ.ಎಸ್.ಆರ್. ಪ್ರೌ.ಶಾ. ತಿಮ್ಮಾಪುರ	–	–	1
7. ಎಸ್.ಜೆ.ಜೆ.ಎಂ. ಪ್ರೌ.ಶಾ.ಮುಳಗುಂದ	–	–	1
8. ಪಂಡಿತ ನೆಹರು ಪ್ರೌ.ಶಾ. ಶಿರಗುಪ್ಪಿ	–	1	–
9. ಎಸ್.ಎಸ್.ಎಸ್. ಪ್ರೌ.ಶಾ. ಹುಬ್ಬಳ್ಳಿ	1	–	–
10. ಎಫ್.ಆರ್.ಎನ್.ಎಸ್.ಪ್ರೌ.ಶಾ. ಧಾರವಾಡ	3	–	–
11. ಸೇಂಟ್ ಜೋಸಫ್ ಪ್ರೌ.ಶಾ. ಧಾರವಾಡ	2	–	–
12. ಕರ್ನಾಟಕ ಪ್ರೌಢಶಾಲೆ, ಧಾರವಾಡ	4	–	–
13. ಬಿ.ಎಂ. ಆಂಗ್ಲ ಮಾಧ್ಯಮ ಪ್ರೌ.ಶಾ. ಗದಗ	1	–	–
14. ಎಸ್.ಎಂ.ಸಿ.ಪ್ರೌ.ಶಾ. ಗದಗ	–	1	1
15. ಕೆ.ಇ. ಬೋರ್ಡ್ ಎಲ್.ಎಸ್. ಧಾರವಾಡ	1	–	–
16. ಬಿ.ಇ.ಎಸ್. ಗರ್ಲ್ಸ್ ಪ್ರೌ.ಶಾ. ಸವಣೂರ	–	1	–
17. ಎಸ್.ಎಫ್. ಪ್ರೌ.ಶಾ. ತಿಳವಳ್ಳಿ	1	–	–
18. ಎಸ್.ಎಸ್.ಬಿ. ಪ್ರೌ.ಶಾಲೆ, ನರೇಗಲ್	–	1	–
19. ಎಸ್.ಬಿ.ಬಿ. ಜಿ. ಪ್ರೌ.ಶಾ. ಶಿಡೇನೂರ	1	–	–
20. ಎಸ್.ಬಿ. ಪ್ರೌ.ಶಾ.ತುಮ್ಮಿನಕಟ್ಟಿ	1	–	–
21. ಎನ್.ಎಂ.ಡಿ. ಬಾಲಿಕಾ ಪ್ರೌ.ಶಾ.ಹಂಸಭಾವಿ	1	–	–
22. ಬಿ.ಟಿ.ಪ್ರೌ.ಶಾ.ಮಾಸೂರ	1	–	–

23. ಎಸ್.ವಿ.ಎಂ. ಪ್ರೌ.ಶಾ. ಕುಡಪಲಿ	1	–	–
24. ಮುನ್ಸಿಪಲ್ ಪ್ರೌ.ಶಾ. ಹಾವೇರಿ	1	–	–
25. ಎಸ್.ಜೆ.ಟಿ.ಪ್ರೌ.ಶಾಲೆ. ಡಂಬಳ	1	–	–
26. ಮುನ್ಸಿಪಲ್ ಎಸ್. ರಾಣೆಬೆನ್ನೂರ್	3	–	–
27. ವಿ.ಎಫ್. ಪಾಟೀಲ, ಪ್ರೌ.ಶಾ. ರೋಣ	1	1	0
28. ಎನ್.ಎ. ಪ್ರೌ.ಶಾಲೆ. ನಿಗಡುಂದಿ	1	–	–
29. ಸಂಗಮೇಶ್ವರ ಪ್ರೌ.ಶಾ. ಸವಡಿ	–	–	1
30. ನಾಗಲಿಂಗೇಶ್ವರ ಪ್ರೌ.ಶಾ.ನವಲಗುಂದ	–	1	–
31. ಜಿ.ವಿ. ಪ್ರೌಢಶಾಲೆ ಹೊನರಿತಿ	2	–	1
32. ಎಸ್.ಜಿ.ಎಸ್. ಭೈರಿದೇವರಕೊಪ್ಪ	–	–	1
33. ನ್ಯೂ ಇಂಗ್ಲೀಷ್ ಸ್ಕೂಲ್, ಆಳ್ನಾವರ	1	–	–
34. ಕಾನ್‌ವೆಂಟ್ ಎಚ್.ಎಸ್. ಹುಬ್ಬಳ್ಳಿ	1	–	–
35. ಫಾತಿಮಾ ಎಚ್.ಎಸ್. ಹುಬ್ಬಳ್ಳಿ	1	–	–
36. ಕೃಪಾದನಾಂ ಎಚ್.ಎಸ್. ಹುಬ್ಬಳ್ಳಿ	2	–	–
37. ಎಂ.ವಿ.ಪಿ. ಗರ್ಲ್ಸ್ ಎಚ್.ಎಸ್. ಹುಬ್ಬಳ್ಳಿ	–	–	1
38. ಸೇಂಟ್ ಮೇರಿ ಎಚ್.ಎಸ್. ಹುಬ್ಬಳ್ಳಿ	1	–	–
39. ಜಯದೇವಿತಾಯಿ ಗರ್ಲ್ಸ್ ಪ್ರೌ.ಶಾ. ಧಾರವಾಡ	1	–	–
40. ಸಿ.ಇ.ಎಸ್. ಪ್ರೌ.ಶಾ. ಚಳಗೇರಿ	–	1	–
41. ಮುನ್ಸಿಪಲ್ ಪ್ರೌ.ಶಾಲೆ ಗದಗ	2	–	–
42. ಮುನ್ಸಿಪಲ್ ಪ್ರೌ.ಶಾ. ಲಕ್ಷ್ಮೇಶ್ವರ	4	–	0
43. ಲ್ಯಾಮಿಂಗ್‌ಟನ್ ಬಾಲಕರ ಎಚ್.ಎಸ್. ಹುಬ್ಬಳ್ಳಿ	3	–	–
44. ಲ್ಯಾಮಿಂಗಟನ್ ಗರ್ಲ್ಸ್ ಎಚ್.ಎಸ್.ಹುಬ್ಬಳ್ಳಿ	1	–	–
45. ಕಲ್ಮೇಶ್ವರ ಗಂಡುಮಕ್ಕಳ ಪ್ರೌ.ಶಾ. ಹೊಳೆ ಆಲೂರ	4	–	1
	48	8	10

ಪದವಿ-ಪೂರ್ವ ಕಾಲೇಜುಗಳ ವಿವರ

ಕಾಲೇಜಿನ ಹೆಸರು	ಹುದ್ದೆಗಳ ಹೆಸರು
1. ಎಸ್.ಕೆ.ಸಂ.ಪ.ಪೂ. ಕಾಲೇಜ, ಹೊಳೆ ಆಲೂರ	ವಾಣಿಜ್ಯಶಾಸ್ತ್ರ ಉಪನ್ಯಾಸಕರು,
2. ಎಸ್.ಎ.ಸಂ.ಪ.ಪೂ.ಕಾ, ಆಣ್ಣಿಗೇರಿ,	ವಾಣಿಜ್ಯಶಾಸ್ತ್ರ ಉಪನ್ಯಾಸಕರು
3. ನ್ಯೂ ಇಂಗ್ಲೀಷ್ ಸಂ.ಪ.ಪೂ.ಕಾ, ಅಳ್ನಾವರ,	ಹಿಂದಿ ಉಪನ್ಯಾಸಕರು
4. ಕೆ.ವಿ.ಎಸ್.ಆರ್.ಸಂ.ಪ.ಪೂ.ಗದಗ	ಸಮಾಜಶಾಸ್ತ್ರ ಉಪನ್ಯಾಸಕರು
5. ಎಸ್.ಜೆ.ಜಿ.ಎಂ.ಪ.ಪೂ.ಕಾ, ಮುಳಗುಂದ	1. ಇಂಗ್ಲಿಷ್ ಉಪನ್ಯಾಸಕರು 2. ಸಮಾಜಶಾಸ್ತ್ರ ಉಪನ್ಯಾಸಕರು
	ಒಟ್ಟು ಆರು ಹುದ್ದೆಗಳು
1. ಶಂಕರಕಾಲೇಜು	ನವಲಗುಂದ
2. ಮಹಂತಸ್ವಾಮಿ ಕಾಲೇಜು	ಹಂಸಬಾವಿ
3. ಪಿ.ಸಿ. ಜಟ್ಟೀಸ್ ಕಾಲೇಜು	ಹುಬ್ಬಳ್ಳಿ
4. ಬಿ.ಎ.ಜೆ.ಎಸ್.ಎಸ್.ಕಾಲೇಜು	ರಾಣಿಬೆನ್ನೂರು
5. ಎ.ಎಸ್.ಎಸ್. ಕಾಲೇಜು	ಗದಗ
6. ಜೆ.ಎಸ್.ಎಸ್. ಕಾಲೇಜು	ಧಾರವಾಡ
7. ಜಿ.ಟಿ. ಕಾಲೇಜು	ಗದಗ
8. ಜಿ.ಹೆಚ್. ಕಾಲೇಜು	ಹಾವೇರಿ
9. ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು	ಹುಬ್ಬಳ್ಳಿ
10. ಕೆ.ಹೆಚ್.ಕೆ. ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್	ಧಾರವಾಡ

ಧಾರವಾಡ ಜಿಲ್ಲೆಯಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು

306 (326) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):-

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿವೆ, (ಅವುಗಳ ಹೆಸರು ಹಾಗೂ ಯಾವ ವರ್ಷದಿಂದ ಅನುದಾನವನ್ನು ಪಡೆಯುತ್ತಿವೆ ಎಂಬುದನ್ನು ವಿವರವಾಗಿ ತಿಳಿಸುವುದು);

ಆ) 1992-93ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಇನ್ನು ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ; (ಹೆಸರುಗಳನ್ನೊಳಗೊಂಡ ವಿವರವನ್ನು ನೀಡುವುದು;

ಡಾ।। ಹೆಗ್ಗಪ್ಪ ಡಿ.ಲಮಾಣಿ. (ಶಿಕ್ಷಣ ಸಚಿವರು):-